1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.3599/2012

| | | | |
|---|---|---|---|
| ಹೆಸರು | : | ಅನುರಾಗ | ಪ್ರಾಸಾಃ 12 |
| ತಂದೆಯ ಹೆಸರು | : | ಸೋಮಣ್ಣ | ಚಾಸಾಃ 83 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | ಖಾಸಗಿ ನೌಕರ | |
| ವಾಸ | : | ಕೋರಮಂಗಲ, ಬೆಂಗಳೂರು. | |

ದಿಃ 17.02.2021 ರಂದು ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1ನೇ ಆರೋಪಿಯ ಕಚೇರಿಯ ಕಾರಿಯಪ್ಪ ಈತನನ್ನು ಭೇಟಿ ಮಾಡಿದೆ. ನಾನು ನ್ಯೂ ಸಿಟಿ ಲೇ ಔಟ್ ಬಿಡದಿಯಲ್ಲಿ ಸೈಟ್ ಖರೀದಿಯ ಬಗ್ಗೆ 1ನೇ ಆರೋಪಿ ಭಾಸ್ಕರ್ ರೆಡ್ಡಿರವರಿಗೆ ಸುಮಾರು ರೂ 3,75,000/- ಹಣವನ್ನು ನಿವೇಶನದ ಬಗ್ಗೆ ನೀಡಿರುತ್ತೇನೆ. ಈ ಬಗ್ಗೆ ಭಾಸ್ಕರ್ ರೆಡ್ಡಿ ಕ್ರಯದ ಕರಾರು ಸಹ ಬರೆದುಕೊಟ್ಟಿರುತ್ತಾನೆ. ಈ ಬಗ್ಗೆ ಕರಾರಿನ ಜೆರಾಕ್ಸ್ ಪ್ರತಿ ಮತ್ತು ರಸೀದಿಯ ಜೆರಾಕ್ಸ್ ಪ್ರತಿಯನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಈ ಬಗ್ಗೆ ನಾನು ಪೊಲೀಸ್‌ನವರಿಗೆ ದೂರನ್ನು ಸಹ ನೀಡಿರುತ್ತೇನೆ. ಸಾಕ್ಷಿಯು ದಿಃ 25.11.2010 ರಂದು ನೀಡಿದ ದೂರನ್ನು ನಿಪಿ.21 ಎಂದು, ಸಾಕ್ಷಿಯ ಸಹಿಯನ್ನು ನಿಪಿ.21(ಎ) ಎಂದು ಗುರುತಿಸಲಾಯಿತು. ಆರೋಪಿ ನನಗೆ ಸೈಟ್‌ನ್ನು ನೀಡಿಲ್ಲ ಹಾಗೂ ಹಣವನ್ನು ವಾಪಸ್ ನೀಡಿಲ್ಲ.

ಪಾಟೀ ಸವಾಲುಃ 1 ಮತ್ತು 2ನೇ ಆರೋಪಿ ಪರ ಶ್ರೀ ಬಿಎಸ್ ವಕೀಲರಿಂದಃ-

1 ಮತ್ತು 2ನೇ ಆರೋಪಿಗಳನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ನಾನು ಒಂದು ಸೈಟ್‌ನ್ನು ಬುಕ್ ಮಾಡಿದ್ದೆ. ಸೈಟ್ ನಂಬರ್ ಹೇಳಲು ಆಗುವುದಿಲ್ಲ. ನಾನು ಒಟ್ಟು ಸುಮಾರು ರೂ 3,75,000/- ಹಣ ನೀಡಿರುತ್ತೇನೆ. ಸೈಟ್‌ನ ಬಗ್ಗೆ ಪೂರ್ಣ ಹಣ ಸಂದಾಯ ಮಾಡಿರಲಿಲ್ಲ. ಹಣ ಪಡೆದು ಸೈಟ್ ರಿಜಿಸ್ಟರ್ ಮಾಡಿ ಎಂದು ಆರೋಪಿಗೆ ನೋಟೀಸ್ ಕೊಟ್ಟಿಲ್ಲ. ಹಣ ಕೊಡುವಂತೆ ನೊಟೀಸ್ ಕೊಟ್ಟಿದ್ದೆ. ಕ್ರಯದ ಕರಾರಿನ ಬಗ್ಗೆ ನ್ಯಾಯಾಲಯದಲ್ಲಿ ಕೇಸು ಹಾಕಿಲ್ಲ. ಗ್ರಾಹಕರ ನ್ಯಾಯಾಲಯದಲ್ಲಿ ದೂರು ನೀಡಿಲ್ಲ. ಸೈಟ್‌ನ ದಾಖಲಾತಿಗಳನ್ನು ನೋಡಿರುತ್ತೇನೆ. 1ನೇ ಆರೋಪಿಗೆ ಯಾವುದೇ ಹಣ ನೀಡದ ಕಾರಣ ಮೂಲ ರಸೀದಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಗೆ ತೊಂದರೆ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯೂಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ

ಪಿಡಬ್ಲ್ಯೂ: 12